ಭೂನ್ಯಾಯ ಮಂಡಳಿ ಸದಸ್ಯರ ಭತ್ಯಗಳ ಬಗ್ಗೆ

೫೬೩. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭೂ ನ್ಯಾಯ ಮಂಡಳಿ ಸದಸ್ಯರುಗಳಿಗೆ ಭತ್ಯವನ್ನೇನಾದರೂ ನೀಡಲಾಗುತ್ತಿದೆಯೇ ;

ಆ) ಹಾಗಿದ್ದಲ್ಲಿ ನೀಡಲಾಗುತ್ತಿರುವ ಭತ್ಯೆ ಎಷ್ಟು ಹಾಗೂ ನೀಡಲು ಅನುಸರಿಸುತ್ತಿರುವ ಕ್ರಮವೇನು ;

ಇ) ಸದಸ್ಯರಿಗೆ ಸರ್ಕಾರವು ನೀಡುವ ಭತ್ಯೆದ ಬಾಕಿ ಏನಾದರೂ ಇದೆಯೆ ? ಹಾಗಿದ್ದಲ್ಲಿ ಎಷ್ಟು ಬಾಕಿ ಇದೆ ;

ಈ) ಅದಕ್ಕೆ ಕಾರಣಗಳೇನು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು)—

ಅ) ಹೌದು.

ಆ) ಕರ್ನಾಟಕ ಭೂ ಸುಧಾರಣಾ ನಿಯಮ ೧೯೭೪ರ ನಿಯಮ ೧೮ರ ಪ್ರಕಾರ ಭೂ ನ್ಯಾಯ ಮಂಡಳಿಯ ಮೀಟಿಂಗ್‌ನಲ್ಲಿ ಭಾಗವಹಿಸುವ ಅಧಿಕಾರೇತರ ಸದಸ್ಯರಿಗೆ ಅವರಿಗೆ ಪ್ರವಾಸ ಭತ್ಯವನ್ನು ರಾಜ್ಯದ ವಿಧಾನ ಮಂಡಲದ ಸದಸ್ಯರಿಗೆ ಕೊಡಲ್ಪಡುವ ಪ್ರವಾಸ ಭತ್ಯವನ್ನು ಕೊಡುವುದರ ಜೊತೆಗೆ ಸಿಟ್ಟಿಂಗ್ ಇದ್ದಾಗ ದಿನ ಒಂದಕ್ಕೆ ೩೦ ರೂ.ಗಳಂತೆ ದಿನಭತ್ಯೆಯನ್ನು ಕೊಡಲಾಗುವುದು.

ಈ ಸದಸ್ಯರು ತಮ್ಮ ಪ್ರವಾಸ ಭತ್ಯದ ಬಿಲ್ಲನ್ನು ಸಂಬಂಧಪಟ್ಟ ತಾಲ್ಲೂಕು ಭೂನ್ಯಾಯ ಮಂಡಲಿಯ ಅಧ್ಯಕ್ಷರಿಗೆ ಸಲ್ಲಿಸಿ ಸದರಿ ಅಧ್ಯಕ್ಷರು ಆ ಬಿಲ್ಲುಗಳನ್ನು ಪರಿಶೀಲಿಸಿ ಮೇಲಟ ಸಹಿಯೊಂದಿಗೆ ಸಂಬಂಧಪಟ್ಟ ಖಜಾನೆಗೆ ಕಳುಹಿಸಿ ಹಣ ತಂದ ಬಳಿಕ ಸದಸ್ಯರು ಭತ್ಯೆಯ ಹಣವನ್ನು ಪಡೆಯಬಹುದು.

ಇ) ಇದೆ. ರೂ. ೭,೫೧,೦೨೮ ಗಳು.

ಈ) ಕೆಲವು ಪ್ರಕರಣಗಳಲ್ಲಿ ಪ್ರಸಕ್ತ ವರ್ಷದ ಆಯವ್ಯಯದಲ್ಲಿ ಒದಗಿಸಿರುವ ಹಣವು ಪೂರ್ತಿಯಾಗಿ ವ್ಯಯವಾಗಿ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕಾಗಿದೆ. ಇನ್ನು ಕೆಲವು ಪ್ರಕರಣಗಳಲ್ಲಿ ಭೂನ್ಯಾಯ ಮಂಡಳಿಯ ಸದಸ್ಯರು, ಪ್ರವಾಸ ಭತ್ಯದ ಬಿಲ್ಲುಗಳನ್ನು ಇನ್ನು ಸಲ್ಲಿಸಿರುವುದಿಲ್ಲ.

ರಾಜ್ಯದಲ್ಲಿ ಭಿಕ್ಷಾಟನೆ ತಡೆಯುವ ಬಗ್ಗೆ

೩೭೬. ಶ್ರೀಮತಿ ಲೀಲಾವತಿ ಆರ್. ಪ್ರಸಾದ್ (ಅಥಣಿ) —ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈ ರಾಜ್ಯದಲ್ಲಿ ಭಿಕ್ಷಾಟನೆ ತಡೆಗೆ ಕೈಗೊಂಡಿರುವ ಕ್ರಮಗಳೇನು ;

ಆ) ಈ ಬಗ್ಗೆ ನಿಯಮಗಳನ್ನು ರಚಿಸಲಾಗಿದೆಯೇ ;

ಇ) ಈ ನಿಯಮಗಳಿಗನುಸಾರವಾಗಿ ಕಳೆದ ೩ ವರ್ಷಗಳಲ್ಲಿ ಎಷ್ಟು ಜನ ಭಿಕ್ಷುಕರನ್ನು ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಪಾಗೂ ಎಷ್ಟು ಭಿಕ್ಷುಕರನ್ನು ರಾಜ್ಯದಿಂದ ಹೊರಗೆ ಕಳುಹಿಸಲಾಗಿದೆ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು)—

ಅ) ರಾಜ್ಯದಲ್ಲಿ ಭಿಕ್ಷಾಟನೆ ತಡೆಗೆ ಈ ಕೆಳಕಂಡ ಸ್ಥಳಗಳ ನಿರಾಶ್ರಿತರ ಪರಿಹಾರ ಕೇಂದ್ರಗಳನ್ನು ತೆರೆಯಲಾಗಿದೆ.

೧. ಬೆಂಗಳೂರು, ೨. ಮೈಸೂರು, ೩. ದಾವಣಗೆರೆ, ೪. ಶಿವಮೊಗ್ಗ, ೫. ಹುಬ್ಬಳ್ಳಿ-ಧಾರವಾಡ, ೬. ಬೆಳಗಾಂ, ೭. ವಿಜಾಪುರ, ೮. ಗುಲ್ಬರ್ಗಾ, ೯. ಮಂಗಳೂರು, ೧೦. ಬಳ್ಳಾರಿ.

ಅ) ಹೌದು.

ಇ) '

ವರ್ಷ	ಕಳೆದ ೩ ವರ್ಷಗಳಲ್ಲಿ ಈ ಕೆಳಕಂಡಂತೆ ಭಿಕ್ಷುಕರನ್ನು ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಸೇರ್ಪಡೆ ಮಾಡಲಾಗಿದೆ.	ಈ ಕೆಳಕಂಡ ಭಿಕ್ಷುಕರನ್ನು ರಾಜ್ಯದಿಂದ ಹೊರಗೆ ಕಳುಹಿಸಲಾಗಿದೆ.
೧೯೮೫-೮೬	೧೬೩೩	೧೮೯
೧೯೮೬-೮೭	೨೦೧೯	ಇಲ್ಲ
೧೯೮೭-೮೮	೧೭೦೯	ಇಲ್ಲ
(೩೧-೧೨-೧೯೮೭ರ ವರೆವಿಗೆ)		

ಜಿಲ್ಲೆಗಳ ಪುನರ್ವಿಂಗಡಣೆ

೩೭೭. ಶ್ರೀಮತಿ ಲೀಲಾವತಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದ ಜಿಲ್ಲೆಗಳ ಪುನರ್ವಿಂಗಡಣೆ ಕುರಿತು ಸರ್ಕಾರವು ಇದುವರೆವಿಗೂ ಎಷ್ಟು ಸಮಿತಿಗಳನ್ನು ನೇಮಿಸಿತ್ತು ;

ಆ) ಆ ಪೈಕಿ ಎಷ್ಟು ಸಮಿತಿಗಳು ವರದಿಗಳನ್ನು ಸಲ್ಲಿಸಿವೆ ;

ಇ) ವರದಿಗಳನ್ನು ಸಲ್ಲಿಸಿದ್ದಲ್ಲಿ ಅವುಗಳನ್ನು ಸರ್ಕಾರವು ಪರಿಶೀಲಿಸಿ ಕೈಗೊಂಡ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು)—

ಅ) ಮೂರು ಸಮಿತಿಗಳು. ಅವುಗಳೆಂದರೆ :

೧. ಶ್ರೀ ವಾಸುದೇವರಾವ್ ಆಯೋಗ—೧೯೭೩.

೨. ಶ್ರೀ ಟಿ.ಎಂ. ಹುಂಡೇಕರ್ ಸಮಿತಿ—೧೯೮೪.

೩. ಶ್ರೀ ಪಿ.ಸಿ. ಗದ್ದಿಗೌಡರ್ ಸಮಿತಿ—೧೯೮೬.

ಆ) ಈ ಎಲ್ಲಾ ಸಮಿತಿಗಳೂ ತಮ್ಮ ವರದಿಗಳನ್ನು ಸಲ್ಲಿಸಿವೆ.

ಇ) ವರದಿಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ಬಹುಮಹಡಿ ಕಟ್ಟಡದ ಬಗ್ಗೆ

೩೮೦. ಶ್ರೀಮತಿ ಲೀಲಾವತಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಬಹು ಅಂತಸ್ತಿನ ಕಟ್ಟಡಗಳ ಪ್ಲಾಟು ಸ್ವತನ್ನು ಪರ್ಗಾಯಿಸುವಾಗ ಪಡೆಯುತ್ತಿರುವ ನೋಂದಣಿಯ ಸ್ಟಾಂಪ್ ಶುಲ್ಕವೆಷ್ಟು ;

ಆ) ಬಹು ಅಂತಸ್ತಿನ ಕಟ್ಟಡಗಳ ನಿವೇಶನಗಳನ್ನು ಪರ್ಗಾಯಿಸುವಾಗ ಕಟ್ಟಡಕ್ಕಾಗಿ ಮಾತ್ರ ನೊಂದಣಿ ಸ್ಟಾಂಪ್ ಶುಲ್ಕ ತೆಗೆದುಕೊಳ್ಳುತ್ತಿರುವುದು ನಿಜವೆ ;